

ಹೆಬ್ಬೆ ಜಲಪಾತ

8ಕಿ.ಮೀ. ಅಂತರದಲ್ಲಿದೆ. ಬೆಂಗಳೂರಿನಿಂದ 270 ಕಿ.ಮೀ.

ಕರ್ನಾಟದ ಊಟಿ ಎನಿಸಿರುವ ಕೆಮ್ಮಣ್ಣುಗುಂಡಿಯಿಂದ ಖಾಸಗಿ ಜೀಪಿಗಳು, ಪ್ರವಾಸಿಗರನ್ನು ಹೆಬ್ಬೆ ಸಮೀಪದವರೆಗೂ ಅಭಯಾರಣ್ಯದ ಕಚ್ಚಾ ರಸ್ತೆಯಲ್ಲಿ ಕರೆದೊಯ್ಯುತ್ತವೆ. ತಲೆಯಂತೆ ರೂ 200 ಶುಲ್ಕ ಪಾವತಿಸಬೇಕು.

ಇನ್ನು ವಾಹನವೇರದೆ, ಗುಡ್ಡ ಇಳಿದು ಕಡಿದಾದ ಜಾಗದಲ್ಲಿ ಜಲಪಾತದ ತಳಭಾಗಕ್ಕೆ ಇಳಿದು ಹೋಗುವುದೇ ಒಂದು ಮಜಾ. ಚಾರಣಿಗರಿಗೆ ಹೇಳಿ ಮಾಡಿಸಿದ ತಾಣವಿದು. ವಾಹನದಲ್ಲಿ ಹೋಗುವುದಕ್ಕಿಂತ ಚಾರಣ ಮಾಡಿಕೊಂಡು ಹೋದರೆ ಜೀವವೈವಿಧ್ಯ ಕಣ್ತುಂಬಿಕೊಳ್ಳಬಹುದು. ಹುಲಿ, ಚಿರತೆಗಳ ಆವಾಸ ತಾಣವಾಗಿರುವುದರಿಂದ ಮುನ್ನೆಚ್ಚರಿಕೆ ವಹಿಸುವುದು ಸೂಕ್ತ.

ಹೆಬ್ಬೆ ಜಲಪಾತ ವೀಕ್ಷಣೆಗೆ ಹೋಗುವವರು ವಾಸ್ತವ್ಯ ಮತ್ತು ಊಟಕ್ಕೆ ಹತ್ತಿರದ ಕೆಮ್ಮಣ್ಣುಗುಂಡಿ ಯಾತ್ರಿ ನಿವಾಸ, ಅತಿಥಿ ಗೃಹ ಅಥವಾ ಸಮೀಪದ ಕಲ್ಲತ್ತಿಗಿರಿಯ ಬಳಿ ಇರುವ ಹೋಂಸ್ಟೇಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತ.

## ಹೆಬ್ಬೆಗೂ 'ತಿರುವು' ಕಂಟಕ

ಅದ್ಭುತ 'ಜಲ ಲೋಕ'ವನ್ನೆ ಸೃಷ್ಟಿಸುವ ಹೆಬ್ಬೆಯನ್ನು ಕುಡಿಯುವ ನೀರಿಗಾಗಿ 'ತಿರುವು'ಗೊಳಿಸುವ ಯೋಜನೆ ಜಾರಿಗೊಳಿಸಲು ಜಿಲ್ಲೆಯ ಕೆಲ ಜನಪ್ರತಿನಿಧಿಗಳು ಮತ್ತು ನೀರಾವರಿ ತಜ್ಞರು ಕೈಹಾಕಿದ್ದರು. ಪರಿಸರಾಸಕ್ತರ ವಿರೋಧ ಮತ್ತು ತಾಂತ್ರಿಕ ಕಾರ್ಯಸಾಧುವಲ್ಲವೆನ್ನುವ ಕಾರಣದಿಂದ ಆ ಪ್ರಯತ್ನಕ್ಕೆ ತಡೆ ಬಿದ್ದಿದೆ. ಹೆಬ್ಬೆಯಿಂದ ದುಮ್ಮಿಕ್ಕುವ ನೀರನ್ನು ಕಡೂರು ಪಟ್ಟಣಕ್ಕೆ ಕುಡಿಯುವ ಉದ್ದೇಶಕ್ಕೆ ಪೂರೈಸಲು ಆರಂಭದಲ್ಲಿ ಚಿಂತನೆ ನಡೆದಿತ್ತು. ಭದ್ರಾ ಜಲಾಶಯದಿಂದ ಕುಡಿಯುವ ನೀರು ಒದಗಿಸುವ ಯೋಜನೆ ಕಾರ್ಯಗತಕ್ಕೆ ಬಂದ ಮೇಲೆ, ಕಡೂರು ತಾಲ್ಲೂಕಿನ ಮದಗದ ಕೆರೆಗೆ ಹೆಬ್ಬೆ ತಿರುವು ಯೋಜನೆಯಿಂದ ನೀರು ಹರಿಸಿ, ಆ ಮೂಲಕ ತಾಲ್ಲೂಕಿನ ನೂರಾರು ಕೆರೆಗಳನ್ನು ಭರ್ತಿ ಮಾಡುವ ಯೋಜನೆ ಇನ್ನೂ ಉಸಿರಾಡುತ್ತಲೇ ಇದೆ.

## ಸೂತನಬ್ಬಿ ತಬ್ಬಿ..

ಹನುಮಂತ ಮಿಂದೆದ್ದ ಜಲಪಾತವೇ 'ಹನುಮಗುಂಡಿ' ಅಥವಾ 'ಸೂತನಬ್ಬಿ' ಎನ್ನುವ ಸ್ಥಳ ಪುರಾಣದ ಇತಿಹಾಸ ಇದೆ. ಸುಮಾರು 22 ಮೀಟರ್ ಎತ್ತರಿಂದ ನೀರು ಇಲ್ಲಿ ಧುಮ್ಮಿಕ್ಕುತ್ತದೆ. 'ಕ್ಷೀರ ಪಥ'ದಂತೆ ಕಾಣುವ ಈ ಜಲರಾಶಿಯ ಸೊಬಗು ಸವಿಯುತ್ತಾ ನಿಂತರೆ ಸಮಯ ಕಳೆದ ಪರಿವೇ ಆಗುವುದಿಲ್ಲ.

ಕುದುರೆಮುಖದಿಂದ ಎಸ್.ಕೆ.ಬಾರ್ಡರ್‌ಗೆ ತೆರಳುವ ಮಾರ್ಗದ ರಾಷ್ಟ್ರೀಯ ಉದ್ಯಾನದಲ್ಲಿ ಇರುವ ಸೂತನಬ್ಬಿ ಜಲಪಾತ ಪ್ರವಾಸಿಗರ ಪಾಲಿಗೆ ಅಚ್ಚುಮೆಚ್ಚಿನ ತಾಣ. ಮಳೆಗಾಲದಲ್ಲಿ ಇದರ 'ರುದ್ರ ಭಯಂಕರ ನರ್ತನ' ಕಣ್ತುಂಬಿಕೊಳ್ಳುವುದೇ ಒಂದು ಚೆಂದದ ಅನುಭವ. ಆದರೆ, ಇದನ್ನು ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಜೂನ್ ತಿಂಗಳಿನಿಂದ ಅಕ್ಟೋಬರ್‌ವರೆಗೆ ಅರಣ್ಯ ಇಲಾಖೆ ಪ್ರವಾಸಿಗರಿಗೆ ಪ್ರವೇಶ ನಿರ್ಬಂಧಿಸುತ್ತದೆ.

ಜಲಪಾತದ ವೀಕ್ಷಣಾ ಸ್ಥಳಕ್ಕೆ ತಲುಪಲು ಸುಮಾರು 400 ಮೆಟ್ಟಿಲುಗಳಿದ್ದು, ಕಡಿದಾದ ಜಾಗದಲ್ಲಿ ಮೆಟ್ಟಿಲು ಇಳಿದು ಹೋಗಬೇಕು. ಅತ್ತಲಿಂದ ಮೆಟ್ಟಿಲು ಏರಿ ಬರಬೇಕು. ಮಳೆಗಾಲದಲ್ಲಿ ಮೆಟ್ಟಿಲು ಜಾರುವುದರಿಂದ ಪ್ರವಾಸಿಗರಿಗೆ ಪ್ರವೇಶ ನಿರ್ಬಂಧಿಸಲಾಗುತ್ತಿದೆ ಎನ್ನುವುದು ಈ ಜಲಪಾತದ ನಿರ್ವಹಣೆ ನೋಡಿಕೊಳ್ಳುವ ಕುದುರೆಮುಖ ರಾಷ್ಟ್ರೀಯ ಉದ್ಯಾನದ ಅರಣ್ಯಾಧಿಕಾರಿಗಳ ಸಬೂಬು.

ಅಕ್ಟೋಬರ್‌ನಿಂದ ಮೇವರೆಗೆ ಜಲಪಾತ ವೀಕ್ಷಣೆಗೆ ಯಾವುದೇ ನಿರ್ಬಂಧವಿರುವುದಿಲ್ಲ. ಪ್ರವಾಸಿಗರು ಜಲಪಾತ ವೀಕ್ಷಣೆಗೆ ಈ ಅವಧಿ ಆಯ್ದುಕೊಳ್ಳುವುದು ಸೂಕ್ತ ಎನ್ನುತ್ತಾರೆ ಕುದುರೆಮುಖ ರಾಷ್ಟ್ರೀಯ ಉದ್ಯಾನದ ಅರಣ್ಯಾಧಿಕಾರಿಗಳು.

ಸೂತನಬ್ಬಿ

## ಹೋಗುವ ಮಾರ್ಗ

ಕಳಸದಿಂದ 18 ಕಿ.ಮೀ. ದೂರದಲ್ಲಿದೆ. ಚಿಕ್ಕಮಗಳೂರಿನಿಂದ 124 ಕಿ.ಮೀ. ಪ್ರಯಾಣಿಸಬೇಕು. ವಯಸ್ಕರಿಗೆ ರೂ 40, ಮಕ್ಕಳಿಗೆ ರೂ 20 ಪ್ರವೇಶ ದರ ವಿಧಿಸಲಾಗಿದೆ. ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವೀಕ್ಷಣೆಗೆ ಅವಕಾಶವಿದೆ. ವಾಸ್ತವ್ಯಕ್ಕೆ ಕುದುರೆಮುಖದ ಭಗವತಿ ನಿಸರ್ಗಧಾಮ ಸೂಕ್ತವಾಗಿದೆ.